
# ಕಾಫಿ



ಚಿತ್ರಗಳು: ಸೃಜನ್

ಕಾಫೀ ಶಾಪ್ ಖಾಲಿಯಾಗಿತ್ತು. ಒಂದು ಮೂಲೆಯಲ್ಲಿ ಕೋಟು ಸೂಟು ಧರಿಸಿದ ಒಬ್ಬನೇ ಒಬ್ಬ ಪತ್ರಿಕೆಯನ್ನು ತಿರುವುತ್ತಿದ್ದ. ನಾನು ಗಮನಿಸುವುದನ್ನು ನೋಡಿ ತಲೆ ಎತ್ತಿ ನೋಡಿದ. ಹೋಟೆಲ್ ಸಿಬ್ಬಂದಿ ಇರಬೇಕು! ಇಲ್ಲವೇ, ನನ್ನಂತೆ ಗೇರುಬೀಜವಾಗಿರಬೇಕು.

'ಒಂದು ಕಫೇ ಲಾಟ್ಟೆ' ಎಂದು ಹೇಳುತ್ತಲೇ ಕುಳಿತೆ.

ಸಿಬ್ಬಂದಿ ಆರ್ಡರ್ ತೆಗೆದುಕೊಂಡು ಹೋದಮೇಲೆ, "ಇಲ್ಲಿ ಕೆಪೋಚಿನೋ ಚೆನ್ನಾಗಿರುತ್ತೆ" ಪಕ್ಕದಲ್ಲಿ ಗಂಡಸಿನ ದನಿ ಕೇಳಿ ತಲೆ ಎತ್ತಿದೆ.

"ಎಕ್ಸ್‌ಕ್ಯೂಸ್ ಮೀ?"

"ಕೆಪ್ಪೋಚಿನೋ ಈಸ್ ಗುಡ್ ಹಿಯರ್" ಎಂದು ಮೊದಲು ಹೇಳಿದ್ದನ್ನೇ ಅನುವಾದಿಸಿದ.

"ನೀವು ಈ ರೆಸ್ಟೋರೆಂಟ್‌ನಲ್ಲಿ ಶೆಫ್ ಆಗಿದ್ದೀರಾ?"

"ಹಾಗಿದ್ದರೆ ಚೆನ್ನಾಗಿರೋದು!" ಎಂದು ಹೇಳಿ ನಕ್ಕ.

ಮತ್ತೊಬ್ಬರ ಪ್ರೈವಸಿಯಲ್ಲಿ ಯಾವ ಮುಂದಾಲೋಚನೆಯೂ ಇಲ್ಲದೆ ಮೂಗು ತೂರಿಸಲು ಹೇಗೆ ಸಾಧ್ಯ ಎಂಬ ಉರಿ ಎದ್ದರೂ, ಅವನ ಆಕಾರ, ನಗು ಒಂದು ಕ್ಷಣ ತಬ್ಬಿಬ್ಬು ಮಾಡಿತು.